# ಕೇಂದ್ರೀಯ ಹತ್ತಿ ಸಂಶೋಧನಾ ಸಂಸ್ಥೆ, ನಾಗಪುರ, ಮಹಾರಾಷ್ಟ್ರ

*[ ಭಾರತೀಯ ಕೃಷಿ ಅನುಸಂಧಾನ ಪರಿಷತ್ತು (ಭಾ. ಕೃ. ಅ. ಪ), ಕೃಷಿ ಮಂತ್ರಾಲಯ, ಭಾರತ ಸರ್ಕಾರ ]*

## ಹತ್ತಿ ಬೆಳೆಯ ಸಾಪ್ತಾಹಿಕ ಸಲಹೆ, ಜೂನ್ 25 ರಿಂದ ಜುಲೈ 01, 2024 ರ ಅವಧಿಗೆ

*"ಈ ಸಲಹೆಯು ಆಯಾ ರಾಜ್ಯಗಳ ರಾಜ್ಯ ಕೃಷಿ ವಿಶ್ವವಿದ್ಯಾನಿಲಯಗಳಿಂದ ಸ್ವೀಕರಿಸಿದ ಮಾಹಿತಿಯನ್ನು ಆಧರಿಸಿದೆ"*

| ಕರ್ನಾಟಕ | IMDಯ ಪ್ರಕಾರ ಮಳೆಯ ಮುನ್ಸೂಚನೆ (ಮಿ.ಮೀ) | | | | | | | | | |
|---|---|---|---|---|---|---|---|---|---|---|
| ದಿನಾಂಕ | ಜೂನ್ | | | | | | | | | ಜುಲೈ |
| | 21 | 22 | 23 | 24 | 25 | 27 | 28 | 29 | 30 | 01 |
| ಧಾರವಾಡ | 22 | 0 | 0 | 0.8 | 0 | 3 | 4 | 8 | 8 | 3 |
| ಹಾವೇರಿ | 0 | 0 | 0 | 5 | 1 | 3 | 4 | 10 | 6 | 2 |
| ಮೈಸೂರು | 0 | 0 | 0 | 0.2 | 0 | 7 | 6 | 6 | 4 | 2 |

| ಮಳೆಯ ಮಾಹಿತಿಯ ಮಾದರಿ | | | | | | ಮಳೆಯ ಮಾಹಿತಿಯ ಮೂಲ: |
|---|---|---|---|---|---|---|
| ಮಳೆಯ ಪ್ರಮಾಣ (ಮಿ.ಮೀ) | 0.1-2.4 | 2.5-15.5 | 15.6-64.4 | 64.5-115.5 | 115.6-204.4 | http://nwp.imd.gov.in/bias/dist_fcst.htm |
| | | (ಹಸಿರು) | (ಹಳದಿ) | (ಕಿತ್ತಳೆ) | (ಕೆಂಪು) | |

**ಬೆಳೆಯ ಸ್ಥಿತಿ:**

ಧಾರವಾಡದಲ್ಲಿ, ಹೊಲವನ್ನು ಸ್ವಚ್ಛಗೊಳಿಸಿ, ಬಿತ್ತನೆಗೆ ತಯಾರು ಮಾಡಲಾಗುತ್ತಿದೆ.

ಚಾಮರಾಜ ನಗರದಲ್ಲಿ ಹತ್ತಿ ಬೆಳೆಯು 30-45 ದಿನಗಳ ಸಸ್ಯಕ ಹಂತದಲ್ಲಿದೆ. ಯೂರಿಯ ಮೇಲು ಗೊಬ್ಬರ, ಕಳೆ ನಿರ್ಮೂಲನೆ, ಬದು ಮಾಡುವುದು ಹಾಗು ಇತರೆ ಅಂತರ್ ಬೇಸಾಯ ಕಾರ್ಯಗಳು ಪ್ರಗತಿಯಲ್ಲಿವೆ. ಜಿಗಿ ಹುಳುವಿನ ಬಾಧೆಯು (2-4/3 ಎಲೆಗಳಿಗೆ) ಕಂಡು ಬಂದಿತ್ತು.

ರಾಯಚೂರಿನಲ್ಲಿ ಆರಂಭದಲ್ಲಿ ಬಿತ್ತಿದ ಬೆಳೆ 10 ರಿಂದ 15 ದಿನಗಳ ಸಸಿ ಹೊರಹೊಮ್ಮುವ ಹಂತದಲ್ಲಿದೆ. ಒಟ್ಟಾರೆ, ಈ ವಾರದಲ್ಲಿ ಶೇ.20-30ರಷ್ಟು ಪ್ರದೇಶದಲ್ಲಿ ಬಿತ್ತನೆಯಾಗಿದೆ. ಕೆಲವು ಮಳೆಯಾಶ್ರಿತ ಪ್ರದೇಶಗಳಲ್ಲಿ ಬಿತ್ತನೆ ಕಾರ್ಯ ಕೈಗೊಳ್ಳಲಾಗಿದೆ. ಪೂರ್ವಭಾವಿ ಕಳೆನಾಶಕವನ್ನು ಸಿಂಪಡಿಸಲಾಗಿದೆ. ಆರಂಭಿಕ ಬಿತ್ತಿದ ಬೆಳೆಗೆ ರಸಗೊಬ್ಬರಗಳ (ಡಿಎಪಿ, ಎಂಒಪಿ ಮತ್ತು $MgSO_4$) ಮೊದಲ ಪ್ರಮಾಣವನ್ನು ಶಿಫಾರಸು ಮಾಡಲಾಗಿದ್ದು, ಸತತ ಮಳೆಯಿಂದಾಗಿ ಹತ್ತಿ ಗದ್ದೆಗಳಲ್ಲಿ ಕಳೆಯ ಸಂಖ್ಯೆ ಹೆಚ್ಚಿದೆ.

**ಸಲಹೆ:**

ಧಾರವಾಡದಲ್ಲಿ ರೈತರು ಯಾವುದೇ ಬೀಜೋಪಚಾರ ಮಾಡದಿದ್ದಲ್ಲಿ, ಬೀಜ ಮತ್ತು ಮಣ್ಣಿನಿಂದ ಹರಡುವ ರೋಗಗಳ ನಿರ್ವಹಣೆಗಾಗಿ ಪ್ರತಿ ಕಿಲೋ ಗ್ರಾಂ ಬೀಜಗಳಿಗೆ ಕಾರ್ಬಾಕ್ಸಿನ್ 37.5% + ಥಿರಮ್ 37.5% ಡಿಎಸ್ @3.5 ಗ್ರಾಂ (ಬೇರು ಕೊಳೆತ ಮತ್ತು ಬ್ಯಾಕ್ಟೀರಿಯಾದ ಕಾಯಿಲೆಗಳು) ಅಥವಾ ಫ್ಲಕ್ಸಾಪೈರಾಕ್ಸಾಡ್ (333 ಗ್ರಾಂ/ಲೀ ಎಫ್‌ಎಸ್) @ 1.5 ಮಿ.ಲೀ. ಕೆಜಿ ಬೀಜ ಅಥವಾ ಟೆಟ್ರಾಕೊನಜೋಲ್ 11.6% W/W (12.5% w/v) SL @1.5 ml ಪ್ರತಿ ಕೆಜಿ ಬೀಜಗಳಿಗೆ ಅಥವಾ *ಟ್ರೈಕೋಡರ್ಮಾ ಹಾರ್ಜಿಯಾನಮ್* ಅಥವಾ *ಟ್ರೈಕೋಡರ್ಮಾ ವಿರಿಡೆ* @ 10 g/kg ನಂತೆ ಬೀಜೋಪಚಾರ ಮಾಡಲು ರೈತರಿಗೆ ಸಲಹೆ ನೀಡಲಾಗಿದೆ.

ಚಾಮರಾಜನಗರದಲ್ಲಿ, ರೈತರು ಪ್ರತಿ ಹೆಕ್ಟೇರ್ ಗೆ 100 ರಂತೆ  ಹಳದಿ ಜಿಗುಟು ಬಲೆಗಳನ್ನು ಅಳವಡಿಸಲು  ಮತ್ತು ಅಗತ್ಯವಿದ್ದಲ್ಲಿ ಫ್ಲೋನಿಕಾಮಿಡ್ 50%WG @ 4g/10L (200g/ha) ಅಥವಾ ಡಿನೋಟೆಫುರಾಂ 20% SG @ 3g/10L (150g/ha) ನೀರಿಗೆ ಬೆರೆಸಿ

ಸಿಂಪಡಿಸಲು ಸಲಹೆ ನೀಡಲಾಗಿದೆ.

ರಾಯಚೂರಿನಲ್ಲಿ, ರೈತರು ಕಳೆ ನಿರ್ಮೂಲನೆ ಮಾಡಿ, ಬಿತ್ತನೆಯಾದ ತಕ್ಷಣ ಅಥವಾ 24-48 ಗಂಟೆಗಳ ಒಳಗೆ ಪೆಂಡಿಮೆಥಾಲಿನ್ 30% ಇಸಿ @ 5 ಮಿಲಿ / ಲೀಟರ್ ನೀರಿಗೆ ಅಥವಾ ಪೆಂಡಿಮೆಥಾಲಿನ್ 38.7% ಸಿಎಸ್ @ 3.5 ಮಿಲಿ / ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಲು ಸಲಹೆ ನೀಡಲಾಗಿದೆ. ಆರಂಭಿಕ ಬಿತ್ತಿದ ಬೆಳೆಗೆ ರಸಗೊಬ್ಬರಗಳ (ಡಿಎಪಿ, ಎಂಒಪಿ ಮತ್ತು ಎಂಜಿಎಸ್‌ಒ4) ಮೊದಲ ಪ್ರಮಾಣವನ್ನು ನೀಡಲು ಸೂಚಿಸಲಾಗಿದೆ. ಬಿತ್ತನೆಯ ಸಮಯದಲ್ಲಿ ಯಾವುದೇ ಬೀಜೋಪಚಾರ ಮಾಡದಿದ್ದಲ್ಲಿ, ಬೀಜ ಮತ್ತು ಮಣ್ಣಿನಿಂದ ಹರಡುವ ರೋಗಗಳ ನಿರ್ವಹಣೆಗಾಗಿ ಪ್ರತಿ ಕಿಲೋ ಗ್ರಾಂ ಬೀಜಗಳಿಗೆ ಕಾರ್ಬಾಕ್ಸಿನ್ 37.5% + ಥಿರಮ್ 37.5% ಡಿಎಸ್ @3.5 ಗ್ರಾಂ (ಬೇರು ಕೊಳೆತ ಮತ್ತು ಬ್ಯಾಕ್ಟೀರಿಯಾದ ಕಾಯಿಲೆಗಳು) ಅಥವಾ ಫ್ಲಕ್ಸಾಪೈರಾಕ್ಸಾಡ್ (333 ಗ್ರಾಂ/ಲೀ ಎಫ್‌ಎಸ್) @ 1.5 ಮಿ.ಲೀ. ಕೆಜಿ ಬೀಜ ಅಥವಾ ಟೆಟ್ರಾಕೊನಜೋಲ್ 11.6% W/W (12.5% w/v) SL @1.5 ml ಪ್ರತಿ ಕೆಜಿ ಬೀಜಗಳಿಗೆ ಅಥವಾ *ಟ್ರೈಕೋಡರ್ಮಾ ಹಾರ್ಜಿಯಾನಮ್* ಅಥವಾ *ಟ್ರೈಕೋಡರ್ಮಾ ವಿರಿಡೆ* @ 10 g/kg ನಂತೆ ಬೀಜೋಪಚಾರ ಮಾಡಲು ರೈತರಿಗೆ ಸಲಹೆ ನೀಡಲಾಗಿದೆ.

***ಭಾ. ಕೃ. ಅ. ಪ. – ಕೇಂದ್ರೀಯ ಹತ್ತಿ ಸಂಶೋಧನಾ ಸಂಸ್ಥೆ, ನಾಗಪುರ***

***ಕನ್ನಡ ಅನುವಾದ***

***ಡಾ. ನೀಲಕಂಠ ಸ. ಹಿರೇಮನಿ***